

# ಸಂಭಾವನೆಯ ಸೂಪರ್ ಸ್ಟಾರ್

ಭಾರತದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುತ್ತಿರುವ ನಟರು ಯಾರು? ದಳಪತಿ ವಿಜಯ್ ತಮ್ಮ ವೃತ್ತಿ ಬದುಕಿನ ಕಡೆಯ ಚಿತ್ರಕ್ಕೆ 275 ಕೋಟಿ ರೂಪಾಯಿ ದೊಡ್ಡ ಮೊತ್ತ ಪಡೆಯುವ ವ್ಯವಹಾರ ನಡೆದಿದೆ ಎಂದು ಒಂದು ಮೂಲ ಹೇಳುತ್ತದೆ. 'ಪುಷ್ಪ 3' ಚಿತ್ರಕ್ಕೆ ತೆಲುಗು ನಟ ಅಲ್ಲು ಅರ್ಜುನ್ ಭರ್ತಿ 300 ಕೋಟಿ ರೂಪಾಯಿ ಸಂಭಾವನೆ ಪಡೆಯಲಿದ್ದಾರೆ ಎನ್ನುವ ಮಾತುಕತೆಯೂ ಚಾಲ್ತಿಯಲ್ಲಿ ಇದೆ. ಶಾರುಕ್ ಖಾನ್, ಸಲ್ಮಾನ್ ಖಾನ್ ಅವರಂತಹ ನಟರು ₹200 ಕೋಟಿವರೆಗೆ ಸಂಭಾವನೆ ಪಡೆಯುತ್ತಾರೆ ಎನ್ನುವ ಈ ಲೆಕ್ಕಾಚಾರ ಇದೆ. ಹಾಗಿದ್ದರೆ ಇವರಲ್ಲಿ ಅತಿ ಹೆಚ್ಚು ಸಂಭಾವನೆ ಸಂದದ್ದು ಯಾರಿಗೆ ಎಂಬ ಇನ್ನೊಂದು ಪ್ರಶ್ನೆ ಎದುರಾಗುತ್ತದೆ.

ವಾಸ್ತವದಲ್ಲಿ ಇದುವರೆಗೆ ಒಂದು ಚಿತ್ರಕ್ಕೆ ಅತಿ ಹೆಚ್ಚು ಸಂಭಾವನೆ ಪಡೆದಿರುವ ಭಾರತದ ನಟರಲ್ಲಿ ಇವರು ಯಾರೂ ಇಲ್ಲ. ಅದು ಇದುವರೆಗೆ ರಜನಿಕಾಂತ್ ಅವರ ಹೆಸರಲ್ಲಿಯೇ ಇದೆ ಎಂದು ಇತ್ತೀಚೆಗೆ ಸಿನಿಮಾ ವಲಯದಲ್ಲಿ ಚರ್ಚೆಯೊಂದು ನಡೆದಿದೆ.

ಸಂಭಾವನೆಯ ವಿಷಯವನ್ನು ಬಹುತೇಕ ನಟರು ಗುಟ್ಟಾಗಿಯೇ ಇಟ್ಟುಕೊಳ್ಳುತ್ತಾರೆ. ಅಧಿಕೃತವಾಗಿ ಅದನ್ನು ಪ್ರಕಟಿಸುವುದು ಅಪರೂಪ.

'ಜೈಲರ್' ಚಿತ್ರ ರಜನೀಕಾಂತ್ ಅವರಿಗೆ ದೊಡ್ಡ ಗೆಲುವನ್ನು ತಂದುಕೊಟ್ಟಿತ್ತು. ಬಹಳ ಸಾಧಾರಣ ಎನ್ನಿಸುವ ವಸ್ತುವಿನ ಚಿತ್ರವನ್ನು ಸ್ವರ ಸಂಯೋಜಕ ಅನಿರುದ್ಧ ರವಿಚಂದರ್ ತಮ್ಮ ಹಿನ್ನೆಲೆ ಸಂಗೀತದಿಂದ ದೊಡ್ಡ ಮಟ್ಟಕ್ಕೆ ಮೇಲೆತ್ತಿದ್ದರು ಎಂದೇ ರಜನಿ ಹೇಳಿದ್ದರು. ₹600 ಕೋಟಿ ಗಳಿಸಿದ ಆ ಚಿತ್ರವು ನಿರ್ಮಾಪಕ ಕಲಾನಿಧಿ ಮಾರನ್ ಅವರಿಗೆ ಅನಿರೀಕ್ಷಿತ ಯಶಸ್ಸು ನೀಡಿತ್ತು. ಅವರು ಖುಷಿಯಲ್ಲಿ ರಜನಿ ಅವರಿಗೆ ಇನ್ನೂ ₹100 ಕೋಟಿ ನೀಡಿದ್ದರು. ಅದಕ್ಕೆ ಮೊದಲು ರಜನಿ ಅವರಿಗೆ ಪ್ರಸಾರದ ಹಕ್ಕು, ವಿತರಣೆಯ ಹಕ್ಕು, ಸಂಭಾವನೆ ಎಲ್ಲವೂ ಸೇರಿ ₹110 ಕೋಟಿ ನೀಡಲಾಗಿತ್ತು. ಅಲ್ಲಿಗೆ ಅವರಿಗೆ ಒಟ್ಟು ₹210 ಕೋಟಿ ಸಂದಂತೆ ಆಯಿತು.

ಲೋಕೇಶ್ ಕನಕರಾಜ್ ನಿರ್ದೇಶನದ 'ಕೂಲಿ' ಬಹುಭಾಷಾ ಚಿತ್ರದಲ್ಲಿ ರಜನಿ ಈಗ ಅಭಿನಯಿಸುತ್ತಿದ್ದಾರೆ. ಈ ಚಿತ್ರವು ಗೆಲುವು ಕಂಡಲ್ಲಿ ಏನಿಲ್ಲವೆಂದರೂ ₹300 ಕೋಟಿ ಸಂಭಾವನೆ ರಜನಿ ಅವರಿಗೆ ಸಲ್ಲಲಿದೆ ಎಂಬ ನಿರೀಕ್ಷೆ ಇದೆ.

1990ರ ದಶದಲ್ಲಿ ಒಮ್ಮೆ ಹಾಗೂ 2000ದ ದಶಕದಲ್ಲಿ ಹಲವು ಬಾರಿ ರಜನಿ ತಮ್ಮ ಚಿತ್ರಗಳ ಸೋಲುಂಡಿದ್ದರು. 'ಎಂದಿರನ್' ಹಾಗೂ 'ಚಂದ್ರಮುಖಿ' ಚಿತ್ರಗಳ ಬಾಕ್ಸಾಫೀಸ್ ಗಳಿಕೆ ಅವರ ವೃತ್ತಿ ಬದುಕಿಗೆ ಆಮ್ಲಜನಕ ಮರುಪೂರಣ ಮಾಡಿದ್ದವು. 'ಜೈಲರ್' ಮತ್ತೆ ಅವರ ಸೂಪರ್ ಸ್ಟಾರ್ ಪಟ್ಟಕ್ಕೆ ಹೊಳಪು ನೀಡಿತು. ಈಗ 74 ವರ್ಷ ವಯಸ್ಸಾಗಿರುವ ರಜನಿ ಹಾಗೂ ಕ್ರಿಕೆಟ್‌ನಲ್ಲಿ ಮಿಂಚುತ್ತಿರುವ 43 ವರ್ಷದ ಧೋನಿ ಇಬ್ಬರೂ ಅನುಭವಕ್ಕೆ ಬಲು ಬೆಲೆ ಎಂಬುದಕ್ಕೆ ನಿದರ್ಶನದಂತೆ ಕಾಣುತ್ತಿದ್ದಾರೆ.



## ಸಿಕಂದರ್ ಚಿತ್, ಎಂಪುರಾನ್ ಪಕಡ್

ಮಾರ್ಚ್ ತಿಂಗಳನ್ನು ಹಿಂದಿ ಚಿತ್ರರಂಗದ ಅನೇಕರು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಸಲ್ಮಾನ್ ಖಾನ್ ನಟಿಸಿದ 'ಸಿಕಂದರ್' ಈದ್ ಹೊತ್ತಿಗೆ ತೆರೆಕಂಡಿತು. ಅದೇ ಸಂದರ್ಭದಲ್ಲಿ ಮಲೆಯಾಳಂ ಚಿತ್ರ 'ಎಲ್2: ಎಂಪುರಾನ್' ಕೂಡ ಚಿತ್ರಮಂದಿರಗಳಿಗೆ ಲಗ್ಗೆ ಇಟ್ಟಿತ್ತು. ಹಿಂದಿ ಚಿತ್ರವೊಂದು ದಕ್ಷಿಣದ ಮೋಹನ್ ಲಾಲ್ ಅವರಂತಹ ಸ್ಟಾರ್ ಇರುವ ಚಿತ್ರವನ್ನು ಹೇಗೆ ಚಿತ್ ಮಾಡಬಹುದು ಎಂದು ಗಮನಿಸುತ್ತಿದವರು ಅನೇಕ. ಆದರೆ, ಆಗಿದ್ದೇ ಬೇರೆ.

'ಎಂಪುರಾನ್' ಸಿನಿಮಾ ವಿವಾದಗಳನ್ನು ಮೊದಲು ಮೈಮೇಲೆ ಎಳೆದುಕೊಂಡಿತು. ಗುಜರಾತ್ ಗಲಭೆ ಸಂದರ್ಭದ ಹೂರಣ ಇರುವ ಚಿತ್ರದ ಕೆಲವು ದೃಶ್ಯಗಳನ್ನು ಬಲಪಂಥೀಯರು ಟೀಕಿಸಿದರು. ನಿರ್ಮಾಪಕರ ಮನೆ, ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯದವರು ದಾಳಿ ಕೂಡ ನಡೆಸಿದರು. ಇಷ್ಟರ ನಡುವೆ 23 ಕಟ್ಸ್ ಮಾಡಿ, ಸಿನಿಮಾ ಟ್ರಿಮ್ ಮಾಡಲು ಚಿತ್ರತಂಡ



ನಿರ್ಧರಿಸಿತು. ಯಾರಿಗಾದರೂ ನೋವು ಆಗಿದ್ದರೆ ಕ್ಷಮೆ ಕೇಳುವುದಾಗಿ ಮೋಹನ್ ಲಾಲ್ ಅವರು ಹೇಳಿಕೆ ಕೊಟ್ಟರು.

ಇವೆಲ್ಲವೂ ಸಾಮಾಜಿಕ ಮಾಧ್ಯಮಗಳಲ್ಲಿ ನಿರಂತರ ಚರ್ಚೆ ಹುಟ್ಟುಹಾಕಿದವು. ಪರಿಣಾಮವಾಗಿ 'ಎಂಪುರಾನ್' ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡಿತು. ಸಲ್ಮಾನ್ ಸಿನಿಮಾ ಬಗ್ಗೆ ಟೀಕೆ ವ್ಯಕ್ತವಾದದ್ದೇ ಹೆಚ್ಚು. ಗಳಿಕೆಯಲ್ಲೂ ಮಲೆಯಾಳಂ ಚಿತ್ರವು ಹಿಂದಿ ಸಿನಿಮಾವನ್ನು ಮುಗಿಸಿಹಾಕಿತು.

ಹಿಂದಿ ಸಿನಿಮಾದ ಹಳೆಯ ಕಟ್ಟಡ ಕೆಡಹುವ ಪ್ರಕ್ರಿಯೆ ಇದು. ಹೊಸತನ್ನು ಕಟ್ಟಲು ಹಳೆಯದನ್ನು ಒಡೆಯಲೇಬೇಕು ಎಂಬ ಅರ್ಥದ ಪೋಸ್ಟ್ ಒಂದನ್ನು ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದರು. ಅದರ ಸುತ್ತ ಈಗ ಚರ್ಚೆ ಮುಂದುವರಿದಿದೆ.